# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 119 |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19-12-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ವಿದ್ಯುತ್ ಉತ್ಪಾದನೆಯಲ್ಲಿ ನಮ್ಮ ರಾಜ್ಯವು ಸ್ವಾವಲಂಬಿಯಾಗಿದ್ದರೂ ಸಹ, ಇತರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಗ್ರಾಹಕರಿಗೆ ವಿಧಿಸುತ್ತಿರುವ ವಿದ್ಯುತ್ ದರಗಳು ಬಹಳ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ವಿದ್ಯುತ್ ದರ ಕಡಿಮೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ; | ವಿದ್ಯುತ್ ದರವನ್ನು ಹೆಚ್ಚಿಸಲು ಕಾರಣವಾಗುವ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:<br>1. ವಿದ್ಯುತ್ ಬೇಡಿಕೆಯನ್ನು ಪೂರೈಸಲು ಹೊಸ ಉಷ್ಣಕೇಂದ್ರ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ನ್ನು ಖರೀದಿಸಬೇಕಾಗಿರುವುದರಿಂದ ವಿದ್ಯುತ್ ಖರೀದಿಯ ವೆಚ್ಚವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಆದುದರಿಂದ ಜಕಾತಿ ಹೆಚ್ಚಳವು ಅನಿವಾರ್ಯವಾಗಿದೆ.<br>2. ದೀರ್ಘಕಾಲದ ವಿದ್ಯುತ್ ಖರೀದಿ ಒಪ್ಪಂದಗಳಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳು ಉಷ್ಣಕೇಂದ್ರಗಳಿಗೆ ಪ್ರತಿ ತಿಂಗಳು ನಿಗದಿತ ವೆಚ್ಚವನ್ನು ಭರಿಸಬೇಕಾಗುತ್ತದೆ.<br>3. ಇದಲ್ಲದೆ, ನೌಕರರ ಸಂಬಳದ ಪರಿಷ್ಕರಣೆ, ಕಾರ್ಯ ಮತ್ತು ನಿರ್ವಹಣಾ ವೆಚ್ಚ, ಬಂಡವಾಳ ವೆಚ್ಚ ಮತ್ತು ಕಾರ್ಯನಿರತ ಬಂಡವಾಳಕ್ಕಾಗಿ ಸಾಲಗಳ ಮೇಲಿನ ಬಡ್ಡಿ ವೆಚ್ಚಗಳು ಜಕಾತಿ ಪರಿಷ್ಕರಣೆಯಲ್ಲಿ ಒಳಗೊಂಡಿರುತ್ತದೆ.<br>4. ವಿದ್ಯುತ್ ಖರೀದಿ ವೆಚ್ಚ ಮತ್ತು ವಿದ್ಯುತ್ ಮಾರಾಟದಿಂದ ಬರುತ್ತಿರುವ ವ್ಯತ್ಯಾಸವು ಹೆಚ್ಚಾಗುತ್ತಿದ್ದು, ವಿದ್ಯುತ್ ದರ ಏರಿಕೆಯು ಅನಿವಾರ್ಯವಾಗಿರುತ್ತದೆ.<br>ಹೆಚ್.ಟಿ./ಹೆಚ್.ಟಿ.ಗ್ರಾಹಕರ ವಿದ್ಯುಚ್ಛಕ್ತಿ ಬಳಕೆಯನ್ನು ಉತ್ತೇಜಿಸಲು, ಆಯೋಗವು HT-2(a)(i), HT-2(a)(ii), HT-2(b)(i), HT-2(b)(ii), HT-2(c)(i), HT-2(c)(ii) ಹೆಚ್.ಟಿ.ಗ್ರಾಹಕರಿಗೆ ಸರಾಸರಿ ಮಾಸಿಕ ಬಳಕೆಗಿಂತ ಹೆಚ್ಚುವರಿ ಮಾಸಿಕ ಬಳಕೆಗೆ ಪ್ರತಿ ಯೂನಿಟ್ಗೆ ರೂ.6/- ದರದಲ್ಲಿ ರಿಯಾಯಿತಿಯನ್ನು, ರಿಯಾಯಿತಿ ವಿದ್ಯುಚ್ಛಕ್ತಿ ದರ ಯೋಜನೆ (DERS- Discounted Rate Energy Scheme) ಅಡಿಯಲ್ಲಿ ನೀಡಲಾಗುತ್ತಿದೆ. |

...2

| | | |
|---|---|---|
| | | ಇ.ಹೆಚ್.ಟಿ. / ಹೆಚ್.ಟಿ.ಗ್ರಾಹಕರನ್ನು ವಿದ್ಯುತ್ ಜಾಲಕ್ಕೆ ತರಲು, ಕೆ.ಇ.ಆರ್.ಸಿ ಆಯೋಗವು HT-(1), HT-2(a), HT-2(b), and HT-2(c) ಹಾಗೂ ಈ ಜಕಾತಿಗಳ ಉಪವರ್ಗಗಳ ಹೆಚ್.ಟಿ.ಗ್ರಾಹಕರಿಗೆ 10.00 ಗಂಟೆಯಿಂದ 18.00 ಗಂಟೆಗಳ ಸಮಯದಲ್ಲಿ ಮೂಲ ಬಳಕೆ ಯೂನಿಟ್ ಗಳಿಗಿಂತ ಮೇಲ್ಪಟ್ಟು ವಿದ್ಯುಚ್ಛಕ್ತಿಯ ಪ್ರತಿ ಬಳಕೆಯ ಯೂನಿಟ್ ಗೆ ರೂ.1/- ರಂತೆ ರಿಯಾಯಿತಿ ಮತ್ತು ರಾತ್ರಿ 22.00 ಗಂಟೆಯಿಂದ ಬೆಳಿಗ್ಗೆ 06.00 ಗಂಟೆಯ ಅವಧಿಯಲ್ಲಿನ ಬಳಕೆಗೆ ರೂ.2/- ರಂತೆ (ಸಮಯಾಧಾರಿತ ವಿದ್ಯುತ್(TOD) ಅನ್ವಯವಾಗುವ ತಿಂಗಳುಗಳಿಗೆ ಮಾತ್ರ) ವಿಶೇಷ ಪ್ರೋತ್ಸಾಹ ಯೋಜನೆಯಡಿಯಲ್ಲಿ ಪ್ರೋತ್ಸಾಹವನ್ನು ನೀಡಲಾಗುತ್ತಿದೆ.<br><br>ಕೋವಿಡ್-19 ರ ದುಷ್ಪರಿಣಾಮಗಳಿಂದಾಗಿ ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟನ್ನು ತಗ್ಗಿಸಲು, ಸರ್ಕಾರವು ಪ್ರಮಾಣೀಕರಿಸಿದಂತೆ LT-5(a) ಮತ್ತು LT-5(b) ವರ್ಗಕ್ಕೆ 12 ತಿಂಗಳ ಅವಧಿಗೆ ಬಳಸುವ ವಿದ್ಯುತ್ತಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 50 ಪೈಸೆ ರಿಯಾಯಿತಿ ನೀಡಲಾಗುತ್ತಿದೆ.<br><br>ದರ ನಿಗದಿಪಡಿಸುವ ಅಧಿಕಾರವು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. |
| ಆ) | ನಮ್ಮ ರಾಜ್ಯದಿಂದ ಇತರೆ ರಾಜ್ಯಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಪ್ರತಿ ಯೂನಿಟ್ ವಿದ್ಯುತ್ ನ್ನು ಯಾವ ದರಕ್ಕೆ ಮಾರಾಟ ಮಾಡಲಾಗುತ್ತಿದೆ? (ವಿವರ ನೀಡುವುದು) | 2022-23ನೇ ಸಾಲಿನಲ್ಲಿ (ಏಪ್ರಿಲ್-2022 ರಿಂದ ಅಕ್ಟೋಬರ್-2022 ರವರೆಗೆ) ವಿದ್ಯುತ್ ವಿನಿಮಯ ಕೇಂದ್ರಗಳಾದ (IEX) ಮತ್ತು Power Exchange of India Limited (PXIL) ಮೂಲಕ 4177.44 ಮಿ.ಯೂ ವಿದ್ಯುತ್ತನ್ನು ಸರಾಸರಿ ದರ ಪ್ರತಿ ಯೂನಿಟ್ ಗೆ ರೂ.5.83 ರಂತೆ ಮಾರಾಟ ಮಾಡಲಾಗಿರುತ್ತದೆ. |

ಸಂಖ್ಯೆ: ಎನರ್ಜಿ 264 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು